ಅಲ್ಪಸಂಖ್ಯಾತರ ಇಲಾಖೆ

ಅಲ್ಪಸಂಖ್ಯಾತರ ಇಲಾಖೆಯಿಂದ ಬಾಗೇಪಲ್ಲಿ ಪಟ್ಟಣದಲ್ಲಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಇರುವುದಿಲ್ಲ.

ಆ) **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**

ಆಯವ್ಯಯದ ಲಭ್ಯತೆ, ನಿಲಯದಲ್ಲಿನ ಸ್ಥಳಾವಕಾಶ ಹಾಗೂ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಸಂಖ್ಯಾಬಲ ಹೆಚ್ಚಿಸಲು ಪರಿಶೀಲಿಸಲಾಗುವುದು.

ಅಲ್ಪಸಂಖ್ಯಾತರ ಇಲಾಖೆ

ಉದ್ಭವಿಸುವುದಿಲ್ಲ.

ಟ್ರಾಮ್ ಸೆಂಟರ್ ತೆರೆಯುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದು

327(1586) ಶ್ರೀ ಅಂಜನಾಮೂರ್ತಿ (ನೆಲಮಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನೆಲಮಂಗಲ ಮತ ಕ್ಷೇತ್ರಕ್ಕೆ ಸೇರಿದ ಮಾಗಡಿ ತಾಲ್ಲೂಕು ಸೋಲೂರು ಹೋಬಳಿ, ಸೋಲೂರು ಗ್ರಾಮದಲ್ಲಿರುವ (ರಾಷ್ಟ್ರೀಯ ಹೆದ್ದಾರಿ 48) ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ರಾಷ್ಟ್ರೀಯ ಹೆದ್ದಾರಿ 48 ಮತ್ತು ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ಅಪಘಾತಗಳು ಸಂಭವಿಸುತ್ತಿರುವುದರಿಂದ ನೆಲಮಂಗಲ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಅಪಘಾತಕ್ಕೊಳಗಾಗುವವರ ನಾವು ನೋವುಗಳನ್ನು ತಡೆಯಲು ಟ್ರಾಮಾ ಸೆಂಟರ್ ಒಂದನ್ನು ತೆರೆಯುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಆರ್. ಅಶೋಕ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಸರ್ಕಾರವು ಮಾರ್ಗಸೂಚಿ ಪ್ರಕಾರ ಹಾಗೂ ಅನುದಾನದ ಲಭ್ಯತೆ ಆಧರಿಸಿ ಪರಿಶೀಲಿಸಿ ಕ್ರಮ ಕೈಗೊಳ್ಳುವುದು.

ಆ)ಮತ್ತು ಇ) ಈಗಾಗಲೇ ಕೆ.ಹೆಚ್.ಎನ್.ಡಿ.ಪಿ ಯೋಜನೆ ಅಡಿಯಲ್ಲಿ ಈ ಆಸ್ಪತ್ರೆಯಲ್ಲಿ ಟ್ರಾಮ್ ಸೆಂಟರ್‌ನ್ನು ತೆರೆಯಲಾಗಿದೆ.

ಪಶು ಸಂಗೋಪನಾ ಆಸ್ಪತ್ರೆಗಳು

328(1098) ಶ್ರೀ ಅಕ್ಕಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೊಳ) : ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಜಿಲ್ಲೆಯಲ್ಲಿನ ಪಶುಸಂಗೋಪನೆ ಆಸ್ಪತ್ರೆಗಳಲ್ಲಿ ಪಶುವೈದ್ಯರ ಕೊರತೆಗಳೆಷ್ಟು; ಅವುಗಳನ್ನು ತುಂಬಲು ಸರ್ಕಾರದ ಕ್ರಮವೇನು?

ಆ) ಧಾರವಾಡ ಜಿಲ್ಲೆಯಲ್ಲಿನ ಪಶುಸಂಗೋಪನೆ ಆಸ್ಪತ್ರೆಗಳು ಒಟ್ಟು ಎಷ್ಟಿವೆ, ಧಾರವಾಡ ಜಿಲ್ಲೆಯಲ್ಲಿ ಪಶುಸಂಗೋಪನೆ ಆಸ್ಪತ್ರೆಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹೊಸದಾಗಿ ಆಸ್ಪತ್ರೆಗಳನ್ನು ತೆರೆಯಲು ಸರ್ಕಾರದ ತೆಗೆದು ಕೊಂಡಿರುವ ಕ್ರಮಗಳೇನು?

ಶ್ರೀ ರೇವು ನಾಯಕ ಬೇಳಮಗಿ (ಪಶುಸಂಗೋಪನೆ ಸಚಿವರು) :

ಅ) ಧಾರವಾಡ ಜಿಲ್ಲೆಯಲ್ಲಿ ಪಶುವೈದ್ಯ ಆಸ್ಪತ್ರೆಗಳಲ್ಲಿ ಸಹಾಯಕ ನಿರ್ದೇಶಕರ ವೃಂದದಲ್ಲಿ 7 ಮಂಜೂರಾದ ಹುದ್ದೆಗಳಿದ್ದು ಇವುಗಳ ಪೈಕಿ ಒಂದು ಹುದ್ದೆ ಖಾಲಿ ಇರುತ್ತದೆ ಮತ್ತು ಪಶುವೈದ್ಯಾಧಿಕಾರಿಗಳ ವೃಂದದಲ್ಲಿ 53 ಮಂಜೂರಾದ ಹುದ್ದೆಗಳ ಪೈಕಿ 18 ಹುದ್ದೆಗಳು ಖಾಲಿ ಇರುತ್ತದೆ. ರಾಜ್ಯದಲ್ಲಿ 41 ಪಶುವೈದ್ಯಾಧಿಕಾರಿಗಳನ್ನು ತುಂಬಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ದಿನಾಂಕ: 3.9.2005ರಂದು ಪ್ರಸ್ತಾವನೆ ಸಲ್ಲಿಸಿದೆ. ಇದಲ್ಲದೆ ಇನ್ನೂ 77 ಪಶು ವೈದ್ಯಾಧಿಕಾರಿಗಳು ಮತ್ತು 4 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಮಾಡಿಸಲು ಪ್ರಕ್ರಿಯೆಯನ್ನು ಪ್ರಾರಂಭಿಸಿದೆ.

ಆ) ಧಾರವಾಡ ಜಿಲ್ಲೆಯಲ್ಲಿ ಒಟ್ಟು 107 ಪಶುವೈದ್ಯ ಸಂಸ್ಥೆಗಳಿದ್ದು ವಿವರ ಕೆಳಕಂಡಂತಿದೆ.

1	ಪಶು ಆಸ್ಪತ್ರೆಗಳು	6
2	ಪಶುಚಿಕಿತ್ಸಾಲಯಗಳು	40
3	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು	16
4	ಕೃತಕ ಗರ್ಭಧಾರಣಾ ಕೇಂದ್ರಗಳು	40
5	ಸಂಚಾರಿ ಪಶುಚಿಕಿತ್ಸಾಲಯಗಳು	5
	ಒಟ್ಟು	107

ಧಾರವಾಡ ಜಿಲ್ಲೆಯಲ್ಲಿ ಪಶುವೈದ್ಯಕೀಯ ಸಂಸ್ಥೆಗಳ ಕೊರತೆ ಇರುವುದಿಲ್ಲ.

ಇ) ಧಾರವಾಡ ಜಿಲ್ಲೆಯಲ್ಲಿ ಹೊಸ ಆಸ್ಪತ್ರೆಗಳನ್ನು ತೆರೆಯಲು ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1098 ಅನುಬಂಧ–1

ಕ್ರ. ಸಂ	ಪಶು ಆಸ್ಪತ್ರೆ		ಪಶು ಚಿಕಿತ್ಸಾಲಯ		ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ		ಕೃತಕ ಗರ್ಭಧಾರಣಾ ಕೇಂದ್ರ		ಸಂಚಾರಿ ಪಶು ಚಿಕಿತ್ಸಾ ಘಟಕ
1	2		3		4		5		6
1	1	ಧಾರವಾಡ	1	ಉಪ್ಪಿನ ಬೆಟಗೇರಿ	1	ಹುಲಿಕೇರಿ	1	ಕೊಟೂರು	ಧಾರವಾಡ
	2	ಆಳ್ನಾವರ	2	ಅಮ್ಮಿನ ಭಾವಿ	2	ಎ.ಪಿ.ಎಂ.ಸಿ. ಧಾರವಾಡ	2	ಶಿವಳ್ಳಿ	
			3	ಹೆಬ್ಬಳ್ಳಿ	3	ಕೆಳಗೇರಿ	3	ಮಮ್ಮಿಘಾಟ್ಟ	
			4	ಮರಡಗಿ	4	ಮಂಗಲಘಟ್ಟ	4	ತಡಕೋಡ	
			5	ತೇಗೂರು	5	ಕಬ್ಬೇನೂರು	5	ಹಾರೋಬೆಳವಾಡಿ	
			6	ಮನಗುಂದಿ	6	ರಾಯಾಪೂರ	6	ಮುಗಧ	
			7	ನರೇಂದ್ರ	7	ಕರಡಿಗುಡ್ಡ	7	ಮದನಭಾವಿ	
			8	ನಿಗಧಿ			8	ಕಣವಿ ಹೊನ್ನಾಪುರ	
			9	ನವಿಲೂರು			9	ಅರಬಟಗಿ	
							10	ಗರಗ	
2	1	ಹುಬ್ಬಳ್ಳಿ	1	ಬ್ಯಾಹಟ್ಟಿ	1	ಸುಳ್ಳ	1	ಅಮರಗೋಳ	ಹುಬ್ಬಳ್ಳಿ
			2	ನೊಲ್ವಿ	2	ಕೋಳಿವಾಡ	3	ಹೆಬಸೂರು	
			3	ಕೂಸಗಲ್	3	ಬಿಡನಾಳ	3	ರಾಯನಾಳ	
			4	ಗೋಪನಕೊಪ್ಪ			4	ಶಿರಗುಪ್ಪಿ	
			5	ಮಂಟೂರು			5	ವರೂರು	
			6	ಬೆಳಗಲಿ			6	ಅಂಚಟಗೇರಿ	
			7	ಅರಳೀಕಟ್ಟಿ			7	ಹಳಿಯಾಳ	
			8	ಗೋಕುಲ್			8	ಚಬ್ಬಿ	
			9	ಇಂಗಳಹಳ್ಳಿ					
			10	ತರಿಹಾಳ					
			11	ಉಣಕಲ್					
3	1	ಕುಂದಗೋಳ	1	ಗುಡಗೇರಿ	1	ಕೂಬಿಹಾಳ	1	ಬೇಟದೂರು	ಕುಂದಗೋಳ
			2	ಸಂಪಿ	2	ರೊಟ್ಟಿಗವಾಡ	2	ತಿರ್ಲಘಟ್ಟ	
			3	ಕಮದೊಳ್ಳಿ	3	ಹಿರೇಹರಕುಣೀ	3	ಯಲಿವಾಳ	

1	2	3	4	5	6
		4 ಇಂಗಳಗಿ		4 ಯರಗುಪ್ಪಿ	
		5 ಮತ್ತಿಗಟ್ಟಿ		5 ಮಳಲಿ	
		6 ಹಿರೇಗುಂ ಜಾಳ		6 ಯರಬೂದಿ ಹಾಳ	
		7 ಪಶುಪತಿ ಹಾಳ		7 ಭರಂದವಾಡ	
				8 ಕಳಸ	
4	1 ಕಲಘಟಗಿ	1 ಮಿಶ್ರೀಕೋಟಿ		1 ಹಿರೇಹೊನ್ನ ಹಳ್ಳಿ	ಕಲಘಟಗಿ
		2 ಸಂಗಮೇಶ್ವರ		2 ಗಲಗಿಹುಲಿ ಕೊಪ್ಪ	
		3 ತಾವರಗೇರಿ		3 ದೇವಿಕೊಪ್ಪ	
		4 ಮುಕ್ಕಾಲ್		4 ತಬಕದ ಹೊನ್ನಾಳ್ಳಿ	
		5 ದುಮ್ಮಾವಾಡ್		5 ಗಂಡರಟ್ಟಿ	
		6 ಸುರಶೆಟ್ಟಿ ಕೊಪ್ಪ		6 ಕೊಡ್ಲಗಿ	
				7 ಮುತ್ತಗಿ	
				8 ಜಿ.ಬ ರವನ ಕೊಪ್ಪ	
5	1 ನವಲಗುಂದ	1 ಅಣ್ಣಿಗೇರಿ	1 ತಿರ್ಲಪುರ	1 ಕೊಂಡಿ ಕೊಪ್ಪ	ನವಲ ಗುಂದ
		2 ತಡಹಾಳ	2 ನಲವಡಿ	2 ಕಲವಾಡ	
		3 ಮೊರಬ	3 ಶಿರಕೋಳ	3 ಅರಕೇರಹಟ್ಟಿ	
		4 ಶೆಲವಾಡಿ		4 ಭದ್ರಾಪೂರ	
		5 ಜಾವೂರು		5 ಹಳ್ಳಿಕೇರಿ	
		6 ಆಳಗ ವಾಡಿ		6 ನಲವಡಿ	
		7 ಶಿಕುವಿನ ಹಳ್ಳಿ			

ಅನುಬಂಧ – 1

ಚುಕ್ಕೆ ಗುರುತ್ತಿಲ್ಲದ ಲಿಖಿತ ಮೂಲಕ ಪ್ರಶ್ನೆಗಳಿಗೆ ನೀಡಲಾದ ಪ್ರಶ್ನೋತ್ತರಗಳು.

1298(1587) ಶ್ರೀ ಅಂಜನಾಮೂರ್ತಿ (ನೆಲಮಂಗಲ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿನ 6 ನೂತನ ವೈದ್ಯಕೀಯ ಕಾಲೇಜುಗಳನ್ನು ಪೂರ್ಣಗೊಳಿಸಲು 2005 ಮತ್ತು 2006ನೇ ಸಾಲಿಗೆ ಬಿಡುಗಡೆ ಮಾಡಿದ ಹಣವೆಷ್ಟು;